# ಯಾರೂ ಅರಿಯದ ವೀರನೂ ಮೂಡಲ ಸೀಮೆಯ ಕೊಲೆಯೂ



**ಮೌನೇಶ ಬಡಿಗೇರ**

ಕಲೆ: ಬಾದಲ್ ನಂಜುಂಡಸ್ವಾಮಿ

ಕನ್ನಡ ಸಾಹಿತ್ಯಲೋಕದಲ್ಲಿ ಚಿನ್ನದಂತಹ ಅಚ್ಚಳಿಯದ ಅನೇಕ ಕೃತಿಗಳಿವೆ. ಆ ಕೃತಿಗಳಲ್ಲಿ ಸದಾ ಕಾಲ ಮನದಾಳದಲ್ಲಿ ಬದುಕುತ್ತಿರುವ ಅನೇಕ ಪಾತ್ರಗಳಿವೆ. ಅವುಗಳಲ್ಲಿ ಯಾವ ಪಾತ್ರವನ್ನು ಇಲ್ಲಿ ನೆನೆಯಲಿ ಎಂಬುದೇ ಬಹಳ ಕಷ್ಟದ ಕೆಲಸ. ಆದರೂ ಈ ಕ್ಷಣಕ್ಕೆ ಹೊಳೆಯುವ ಎರಡು ಪಾತ್ರಗಳು – ಕುವೆಂಪು ಅವರ 'ಯಾರೂ ಅರಿಯದ ವೀರ' ಎಂಬ ಪುಟ್ಟ ಕಥೆಯಲ್ಲಿ ಬರುವ ಲಿಂಗನೂ ಹಾಗೂ ದೇವನೂರ ಮಹಾದೇವ ಅವರ 'ಮೂಡಲ ಸೀಮೇಲಿ ಕೊಲೆಗಿಲೆ ಮುಂತಾಗಿ' ಎಂಬ ಕಥೆಯಲ್ಲಿ ಬರುವ ರಂಗನೂ. ಈ ಎರಡು ಕಥೆಗಳು ಹಾಗೂ ಈ ಎರಡು ಪಾತ್ರಗಳು ಕನ್ನಡ ಸಾಹಿತ್ಯಲೋಕದ ಎರಡು ಅಪರೂಪದ ರತ್ನಗಳಂತೆ ಸದಾ ಹೊಳೆಯುತ್ತವೆ ಎಂದು ನಾನು ನಿಸ್ಸಂಶಯವಾಗಿ ಹೇಳಬಲ್ಲೆ.

ಲಿಂಗ ಮಲೆನಾಡಿನ ಸುಬ್ಬಣ್ಣಗೌಡರ ಜೀತದ ಆಳು. ರಂಗ, ರಂಗಪ್ಪ ಅಥವಾ ರಂಗ್ಸಾಮಿ ನಂಜನಗೂಡಿನ ಸಮೀಪದ ಹಳ್ಳಿಯ ಗೌಡರ ಜಮೀನನ್ನು ಉಳುವ ಒಕ್ಕಲು. ಈ ಎರಡೂ ಪಾತ್ರಗಳು ಕೆಳಜಾತಿಯ ಪಾತ್ರಗಳು; ಶೋಷಿತ ಪಾತ್ರಗಳು. ಆದರೆ ಕುವೆಂಪು ಅವರ ಕಥೆಯಲ್ಲಿ ಬರುವ ಲಿಂಗ ಈ ಹಿಂದೆ ತಾನಿದ್ದ ಜೀತದ ಧಣಿಗಳಿಂದ ಶೋಷಿತನಾಗಿ, ಎರಡು ವರ್ಷ ಜೈಲು ಶಿಕ್ಷೆ ಅನುಭವಿಸಿ, ಈಗ ಸುಬ್ಬಣ್ಣ ಗೌಡರ ಮನೆ ಸೇರಿ ತನ್ನ ಮಗನ ಸಮೇತ ಬದುಕುತ್ತಿರುವವನು. ಅವನ ಹಾಗೂ ಗೌಡರ ನಡುವಿನ ಸಂಬಂಧ ಮೇಲ್ನೋಟಕ್ಕೆ ಯಜಮಾನ ಹಾಗೂ ಗುಲಾಮನ ಸಂಬಂಧದಂತೆ ಕಂಡರೂ ಅದರಲ್ಲಿ ಬೆರೆತುಕೊಂಡಿರುವ ಮಾನವೀಯ ಸಂಬಂಧವೊಂದು ಓದುಗರ ಮನಸ್ಸನ್ನು ಕರಗುವಂತೆ ಮಾಡುತ್ತದೆ. ಮತ್ತದು ಏಕಮುಖಿಯಾಗಿರದೆ, ಆ ಸಂಬಂಧ ಎರಡೂ ಕಡೆಯಿಂದ ಕೊಟ್ಟು ಪಡೆದುಕೊಳ್ಳುವ ಹಾಗಿರುವುದು ಬಹಳ ವಿಶೇಷವಾದದ್ದು. ಅದಕ್ಕೆ ಉದಾಹರಣೆ ಕಥೆಯಲ್ಲೇ ಸಿಗುತ್ತದೆ – ನೆರೆ ಬಂದು ಇಡೀ ಮನೆಯೇ ತೊರೆಯಬೇಕಾಗಿ ಬಂದಾಗ ಗೌಡರೂ, ಗೌಡರ ಮನೆಯವರೂ, ಲಿಂಗ, ಅವನ ಮಗನೂ – ಹೀಗೆ ಎಲ್ಲರೂ ಒಂದೇ ದೋಣಿಯಲ್ಲಿ ಪ್ರಯಾಣಿಸಬೇಕಾದ ಸಂದರ್ಭ ಬಂದೊದಗುತ್ತದೆ. ದೋಣಿಗೆ ಭಾರ ಹೆಚ್ಚಾಗಿ